# ಕರ್ನಾಟಕ ವಿಶ್ವವಿದ್ಯಾಲಯ
# ಧಾರವಾಡ

## ದಿನಾಂಕ 21.06.2021 ರಂದು ಜರುಗಿದ
## ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡುವಳಿಗಳು

*****

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

No KU/Aca(S&T)/RPH-394/Spl. A.C. Meet/2020-21/1090 ದಿನಾಂಕ : 21 JUN 2021

**ವಿಷಯ:** ದಿನಾಂಕ 21.06.2021 **ರಂದು ಮುಂಜಾನೆ 11.30 ಗಂಟೆಗೆ ಗೋಲ್ಡನ್ ಜ್ಯೂಬ್ಲಿ ಸಭಾ ಭವನದಲ್ಲಿ** ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡುವಳಿಗಳು (Proceedings of the Special Academic Council Meeting held on 21.06.2021).

**ಉಲ್ಲೇಖ:** ಮೀಟಿಂಗ್ ನೋಟಿಸ್ ಸಂಖ್ಯೆ:KU/Aca(S&T)/RPH-394/Spl A.C. Meet/2020-21/1087 dt. 17.06.2021

**ವಿದ್ಯಾವಿಷಯಕ ಪರಿಷತ್ ಸಭೆಗೆ ಹಾಜರಿದ್ದ ಸದಸ್ಯರು:**

| | | | |
|---|---|---|---|
| 1 | ಮಾನ್ಯ ಕುಲಪತಿಗಳು (ಅಧ್ಯಕ್ಷರು) | 19 | ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ (ಸದಸ್ಯರು) |
| 2 | ಡಾ. ಎಂ.ಎನ್.ಮೀರಾನಾಯ್ಕ (ಸದಸ್ಯರು) | 20 | ನಿರ್ದೇಶಕರು, ಸಿ.ಡಿ.ಸಿ. ವಿಭಾಗ, ಕ.ವಿ.ವಿ. ಧಾರವಾಡ (ಸದಸ್ಯರು) |
| 3 | ಶ್ರೀಮತಿ ಪಲ್ಲವಿ ಕೊನ್ನೂರ (ಸದಸ್ಯರು) | 21 | ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಕ.ವಿ.ವಿ. ಧಾರವಾಡ (ಸದಸ್ಯರು) |
| 4 | ಶ್ರೀ ಮಲ್ಲಪ್ಪ ಎಂ.ಬದ್ದಿ (ಸದಸ್ಯರು) | 22 | ಕುಲಸಚಿವರು(ಮೌಲ್ಯಮಾಪನ) (ಸದಸ್ಯರು) |
| 5 | ಡಾ.(ಶ್ರೀಮತಿ) ಎಸ್.ಸಿ.ಶೆಟ್ಟರ್ (ಸದಸ್ಯರು) | 23 | ಹಣಕಾಸು ಅಧಿಕಾರಿಗಳು (ಸದಸ್ಯರು) |
| 6 | ಡಾ. ಎಸ್.ಟಿ.ಬಾಗಲಕೋಟಿ (ಸದಸ್ಯರು) | 24 | ಕುಲಸಚಿವರು (ಸದಸ್ಯ ಕಾರ್ಯದರ್ಶಿಗಳು) |
| 7 | ಡಾ.(ಶ್ರೀಮತಿ) ಜಯಶ್ರೀ ಎಸ್. (ಸದಸ್ಯರು) | | **ವಿಶೇಷ ಆಹ್ವಾನಿತ ಡೀನರು** |
| 8 | ಡಾ. ಕೆ.ಎಂ.ಹೊಸಮನಿ (ಸದಸ್ಯರು) | 1 | ಡಾ.(ಶ್ರೀಮತಿ) ಎ.ಎನ್.ತಾಮ್ರಗುಂಡಿ, ಡೀನರು, ವಾಣಿಜ್ಯ ನಿಖಾಯ |
| 9 | ಡಾ. ಜೆ.ಆರ್.ಟೊನನ್ನವರ (ಸದಸ್ಯರು) | 2 | ಡಾ. ಮಲ್ಲಿಕಾರ್ಜುನ ಪಾಟೀಲ, ಡೀನರು, ಕಲಾ ನಿಖಾಯ |
| 10 | ಡಾ.(ಶ್ರೀಮತಿ) ಎ.ಎನ್.ತಾಮ್ರಗುಂಡಿ (ಸದಸ್ಯರು) | 3 | ಡಾ. ರಮೇಶ ಆರ್.ಕುಲಕರ್ಣಿ, ಡೀನರು, ಮ್ಯಾನೇಜಮೆಂಟ್ ನಿಖಾಯ |
| 11 | ಡಾ. ಮಲ್ಲಿಕಾರ್ಜುನ ಪಾಟೀಲ (ಸದಸ್ಯರು) | 4 | ಡಾ.(ಶ್ರೀಮತಿ) ಎನ್.ಎನ್.ಗಣಿಹಾರ, ಡೀನರು, ಶಿಕ್ಷಣ ನಿಖಾಯ |
| 12 | ಡಾ. ರಮೇಶ ಆರ್.ಕುಲಕರ್ಣಿ (ಸದಸ್ಯರು) | 5 | ಡಾ. ಎಚ್.ಎನ್.ಮೂರ್ತಿ, ಡೀನರು, ವಿಜ್ಞಾನ & ತಂತ್ರಜ್ಞಾನ ನಿಖಾಯ |
| 13 | ಶ್ರೀ ಗಣೇಶ ವಾಯ್. ಅಮರಾವತಿ (ಸದಸ್ಯರು) | 6 | ಡಾ.(ಶ್ರೀಮತಿ) ಎಸ್.ಸಿ.ಶೆಟ್ಟರ್, ಡೀನರು, ಸಮಾಜವಿಜ್ಞಾನ ನಿಖಾಯ |
| 14 | ಶ್ರೀ ರಾಘವೇಂದ್ರ ಸಿ.ಜಿ. (ಸದಸ್ಯರು) | | **ವಿಶೇಷ ಆಹ್ವಾನಿತ** |
| 15 | ಡಾ. ಕೆ.ಮಿನಾಕ್ಷಿ (ಸದಸ್ಯರು) | | ನಿರ್ದೇಶಕರು, IQAC ಘಟಕ, ಕ.ವಿ.ವಿ. ಧಾರವಾಡ |
| 16 | ಶ್ರೀ ಪ್ರಿತೇಶ ಜೈನ್ (ಸದಸ್ಯರು) | | ಡಾ. ಎಸ್.ಎಂ.ತುವಾರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ |
| 17 | ಶ್ರೀ ಕೇಶವಮೂರ್ತಿ ಬೇಲೂರಪ್ಪನವರ (ಸದಸ್ಯರು) | | |
| 18 | ಡಾ. ಬಿ.ಎಸ್.ಗಿರಿಯಪ್ಪನವರ (ಸದಸ್ಯರು) | | |

Hon'ble Vice-Chancellor welcomed all the members to the Academic Council, after thorough deliberations, the following resolutions were passed

<table>
<tr><th>ಕಲಂ. ನಂ.</th><th>ಕಾರ್ಯಸೂಚಿ</th><th>ವಿಭಾಗ / ಕಚೇರಿ</th><th>ನಿರ್ಣಯ</th></tr>
<tr><td>1</td><td>2020–21ನೇ ಸಾಲಿನ ಬೆಸ ಸೆಮಿಸ್ಟರ್ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳನ್ನು ಬಹು ಆಯ್ಕೆಯ ಪ್ರಶ್ನೆಗಳ ಪದ್ಧತಿಯನುಗುಣವಾಗಿ ಪರೀಕ್ಷೆಗಳನ್ನು ಜರುಗಿಸುವ ಕುರಿತಂತೆ ವಿದ್ಯಾವಿಷಯಕ ಪರಿಷತಿನ ಪರಿಶೀಲನೆಗಾಗಿ.</td><td>Examination Section</td><td>ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 16.06.2021 ರಂದು ಜರುಗಿದ ಎಲ್ಲ ನಿಖಾಯದ ಡೀನರ ಸಭೆಯ ಶಿಫಾರಸ್ಸು ಹಾಗೂ ದಿನಾಂಕ 17.06.2021ರ ಎಲ್ಲ ಪ್ರಾಚಾರ್ಯರ ಸಭೆಯ ಶಿಫಾರಸ್ಸಿನ ವಿವರಗಳನ್ನು ಸಭೆಗೆ ವಿವರಿಸಲಾಯಿತು. ನಂತರ 2020–21ನೇ ಸಾಲಿನ ಶೈಕ್ಷಣಿಕ ಅವಧಿಗೆ ಜರುಗುವ ತರಗತಿ / ಪರೀಕ್ಷೆ ವೇಳಾ ಪಟ್ಟಿ, ಪರೀಕ್ಷಾ ವಿಧಾನ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮುಂತಾದ ಮುಖಾಂತರ ವಿಷಯಗಳ ಕುರಿತಂತೆ ಸುದೀರ್ಘವಾಗಿ ಚರ್ಚಿಸಿ ಸಭೆಯು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಂಡಿತು.<br><br>1. ಸ್ನಾತಕ / ಸ್ನಾತಕೋತ್ತರ: 2020–21ನೇ ಶೈಕ್ಷಣಿಕ ವರ್ಷದ ವೇಳಾಪಟ್ಟಿ<br><br>ಪ್ರಸ್ತುತ 2020–21ನೇ ಸಾಲಿನ ಸ್ನಾತಕ / ಸ್ನಾತಕೋತ್ತರ ತರಗತಿ / ಪರೀಕ್ಷಾ ವೇಳಾಪಟ್ಟಿಯನ್ನು ಈ ಕೆಳಗಿನಂತೆ ನಿಗದಿಪಡಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿತು.
<table>
<tr><th>ಕ್ರ. ಸಂ.</th><th>ವಿವರ</th><th>ದಿನಾಂಕ</th></tr>
<tr><td>1</td><td>2, 4, 6, 8 ಹಾಗೂ 10ನೇ ಸೆಮಿಸ್ಟರ್ / ನಾನ್ ಸೆಮಿಸ್ಟರ್ ಎರಡನೇ ಟರ್ಮಿನ ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಪ್ರಾರಂಭದ ದಿನಾಂಕ<br>(90 days including Sunday & Holidays)</td><td>17.05.2021</td></tr>
<tr><td>2</td><td>ಥೇರಿ ವಿಷಯ ತರಗತಿಗಳ ಅವಲೋಕನ / ಪ್ರಯೋಗಾಲಯ ತರಗತಿಗಳು ಆಫ್‌ಲೈನ್ ಮುಖಾಂತರ ನಿರೀಕ್ಷೆ</td><td>02.08.2021<br>ರಿಂದ<br>14.08.2021</td></tr>
<tr><td>3</td><td>2, 4, 6, 8 ಹಾಗೂ 10ನೇ ಸೆಮಿಸ್ಟರ್ / ನಾನ್ ಸೆಮಿಸ್ಟರ್ ಎರಡನೇ ಟರ್ಮಿನ ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಕೊನೆಯ ದಿನಾಂಕ</td><td>14.08.2021</td></tr>
<tr><td>4</td><td>ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತಯಾರಿಯ ಅವಧಿ (ಸಮ ಸೆಮಸ್ಟರ್)</td><td>15.08.2021<br>ರಿಂದ<br>20.08.2021</td></tr>
<tr><td>5</td><td>2, 4, 6, 8 ಹಾಗೂ 10ನೇ (Even Semester) ಸಮ ಸೆಮಿಸ್ಟರ್ ಪರೀಕ್ಷೆ ಆಫ್‌ಲೈನ್ ಮುಖಾಂತರ<br>ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು.</td><td>21.08.2021<br>ರಿಂದ<br>11.09.2021</td></tr>
<tr><td>6</td><td>ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತಯಾರಿಯ ಅವಧಿ (ಬೆಸ್ ಸೆಮಸ್ಟರ್)</td><td>12.09.2021<br>ರಿಂದ<br>19.09.2021</td></tr>
<tr><td>7</td><td>1, 3, 5, 7ನೇ ಹಾಗೂ 9ನೇ (Odd Semester) ಸೆಮಿಸ್ಟರ್ / ನಾನ್ ಸೆಮಿಸ್ಟರ್ ಪರೀಕ್ಷೆ ಆಫ್‌ಲೈನ್ ಮುಖಾಂತರ<br>ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು.</td><td>20.09.2021<br>ರಿಂದ<br>09.10.2021</td></tr>
<tr><td>8</td><td>ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭ: 2021–22</td><td>16.10.2021</td></tr>
</table></td></tr>
</table>

| | | | |
|---|---|---|---|
| | | | **2. ಬೆಸ ಮತ್ತು ಸಮ ಸೆಮಿಸ್ಟರ್ ಪರೀಕ್ಷೆಗಳ ಅನುಕ್ರಮ:**<br>ಸ್ನಾತಕ ಮತ್ತು ಸ್ನಾತಕೋತ್ತರ ಎರಡೂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಮೊದಲು ಸಮ ಸೆಮಿಸ್ಟರ್ ಪರೀಕ್ಷೆಗಳನ್ನು ಜರುಗಿಸಿ ನಂತರ ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ಜರುಗಿಸುವುದೆಂದು ನಿರ್ಣಯಿಸಲಾಯಿತು.<br>**3. ಪರೀಕ್ಷಾ ವಿಧಾನ:**<br>ಮೇಲಿನ ಪಟ್ಟಿಯಂತೆ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳನ್ನು ಬಹು ಆಯ್ಕೆಯ ಪ್ರಶ್ನೆಗಳ ಪದ್ಧತಿಯನುಗುಣವಾಗಿ ಬೆಸ (Odd) ಮತ್ತು ಸಮ (Even) ಸಂಖ್ಯೆಯ ಎಲ್ಲ ಸೆಮಿಸ್ಟರ್‌ಗಳಿಗೆ ಈ ಕೆಳಗಿನ ವಿಧಾನದಂತೆ ಪರೀಕ್ಷೆ ಜರುಗಿಸಲು ತೀರ್ಮಾನಿಸಲಾಯಿತು.<br>1. ಸ್ನಾತಕ ಮತ್ತು ಸ್ನಾತಕೋತ್ತರ ಎರಡೂ ಪರೀಕ್ಷೆಗಳು ಓ.ಎಂ.ಆರ್. ಶೀಟ್‌ನಲ್ಲಿ ಉತ್ತರಿಸುವ ಬಹು ಆಯ್ಕೆಯ ಪದ್ಧತಿಯ ಪ್ರಶ್ನೆ ಪತ್ರಿಕೆ (MCQ) ಯನುಸಾರ ಪರೀಕ್ಷೆಗಳನ್ನು ಜರುಗಿಸುವುದೆಂದು ನಿರ್ಣಯಿಸಲಾಯಿತು.<br>2. 80 ಅಂಕಗಳ ಸ್ನಾತಕ ವಿಷಯಗಳನ್ನು ಪ್ರತಿ ವಿಷಯಕ್ಕೆ 40 ಪ್ರಶ್ನೆಗಳನ್ನು ನಿಗದಿಪಡಿಸಿ ಪ್ರತಿ ಪ್ರಶ್ನೆಗೆ 2 ಅಂಕಗಳಂತೆ ಒಟ್ಟು 80 ಅಂಕಗಳಿಗೆ ಪ್ರಶ್ನೆ ಪತ್ರಿಕೆ ನಿಗದಿಪಡಿಸಿ ಪರೀಕ್ಷಾ ಅವಧಿಯನ್ನು 80+10=90 ನಿಮಿಷಗಳಿಗೆ ಜರುಗಿಸಲು ನಿರ್ಣಯಿಸಲಾಯಿತು. ಮುಂದುವರೆದು, 40 ಅಂಕಗಳ ವಿಷಯಗಳಿಗೆ 20 ಪ್ರಶ್ನೆಗಳನ್ನು ನಿಗದಿಪಡಿಸಿ ಪ್ರತಿ ಪ್ರಶ್ನೆಗೆ ತಲಾ 2 ಅಂಕಗಳಂತೆ 40 ಅಂಕಗಳ ಪ್ರಶ್ನೆ ಪತ್ರಿಕೆ ಸಿದ್ದಪಡಿಸಲು ಹಾಗೂ ಪರೀಕ್ಷಾ ಅವಧಿಯನ್ನು 50+10=60 ನಿಮಿಷಗಳಿಗೆ ನಿಗದಿಪಡಿಸಲು ನಿರ್ಣಯಿಸಲಾಯಿತು.<br>3. ಅದೇ ರೀತಿ ಸ್ನಾತಕೋತ್ತರ ಪ್ರತಿ ವಿಷಯಕ್ಕೆ 50 ಪ್ರಶ್ನೆಗಳನ್ನು ನಿಗದಿಪಡಿಸಿ, ಪ್ರತಿ ಪ್ರಶ್ನೆಗೆ 1.5 ಅಂಕಗಳಂತೆ ಒಟ್ಟು 75 ಅಂಕಗಳಿಗೆ ಪ್ರಶ್ನೆ ಪತ್ರಿಕೆ ನಿಗದಿಪಡಿಸಿ, ಪರೀಕ್ಷಾ ಅವಧಿಯನ್ನು 80+10=90 ನಿಮಿಷಗಳಿಗೆ ಜರುಗಿಸಲು ನಿರ್ಣಯಿಸಲಾಯಿತು.<br>4. ಸ್ನಾತಕ (ಯು.ಜಿ) ಕೋರ್ಸುಗಳ ಪರೀಕ್ಷೆಗಳನ್ನು ಪ್ರತಿ ದಿನದ 3 ಅವಧಿಗಳಲ್ಲಿ ಅಂದರೆ (1) ಮುಂಜಾನೆ 9 ಗಂಟೆಯಿಂದ (2) ಅಪರಾಹ್ನ 12 ಗಂಟೆಯಿಂದ ಮತ್ತು (3) ಮಧ್ಯಾಹ್ನ 3 ಗಂಟೆಯಿಂದ ಜರುಗಿಸಲು ಅವಲೋಕಿಸಿದ್ದನ್ನು ದೃಢೀಕರಿಸಲಾಯಿತು. ಮುಂದುವರೆದು, ಒಂದು ದಿನಕ್ಕೆ ಒಂದು ಸೆಮಿಸ್ಟರ್‌ನ ಒಂದು ಪತ್ರಿಕೆಯಂತೆ ಪರೀಕ್ಷೆ ಜರುಗಿಸುವುದು.<br>5. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಸಮ ಸೆಮಿಸ್ಟರ್‌ನ ಪ್ರಾಯೋಗಿಕ ಪರೀಕ್ಷೆಗಳನ್ನು ಒಬ್ಬ ಆಂತರಿಕ ಅಥವಾ ಬಾಹ್ಯ ಪರೀಕ್ಷಕರಿಂದ ಜರುಗಿಸಲು ನಿರ್ಣಯಿಸಲಾಯಿತು.<br>6. ಸ್ನಾತಕೋತ್ತರ ಪದವಿಗಳ ಸಮ ಸೆಮಿಸ್ಟರ್‌ನ ಥಿಯರಿ ಪತ್ರಿಕೆಗಳನ್ನು ಓ.ಎಂ.ಆರ್.ದಲ್ಲಿ ಉತ್ತರಿಸುವ ವ್ಯವಸ್ಥೆ ಮಾಡಿರುವುದರಿಂದ ಮೌಲ್ಯಮಾಪನವನ್ನು ದ್ವಿ ಮೌಲ್ಯಮಾಪನದ ಬದಲಾಗಿ ಏಕ ಮೌಲ್ಯಮಾಪನಕ್ಕೆ (Single Valuation) ಸೀಮಿತಗೊಳಿಸಿಕೊಳ್ಳಲು ನಿರ್ಣಯಿಸಲಾಯಿತು.<br>**4. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸಮ ಸೆಮಿಸ್ಟರ್‌ಗಳ I.A. / Dissertation / Project Work / Internship ಗಳನ್ನು ಜರುಗಿಸುವ ಕುರಿತು:**<br>ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸಮ ಸೆಮಿಸ್ಟರ್‌ಗಳ I.A. / Dissertation / Project Work / Internship ಗಳನ್ನು ಸೂಕ್ತ ವಿಧಾನಗಳನ್ನು ಅನುಸರಿಸುವುದರೊಂದಿಗೆ ನಿಗದಿತ ಅವಧಿಯೊಳಗೆ ಜರುಗಿಸಲು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು / ಸಂಯೋಜಕರು / ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಅಧಿಕಾರವನ್ನು ನೀಡುವುದೆಂದು ನಿರ್ಣಯಿಸಲಾಯಿತು. |

21/06/21

**(ಡಾ. ಹನುಮಂತಪ್ಪ ಕೆ.ಟಿ.)**
**ಕುಲಸಚಿವರು**

**ಗೆ,**

1. ವಿದ್ಯಾವಿಷಯಕ ಪರಿಷತ್ ಸಭೆಯ ಎಲ್ಲ ಮಾನ್ಯ ಸದಸ್ಯರು. (ಸದಸ್ಯರ ಪಟ್ಟಿಯಂತೆ) ಇ-ಮೇಲ್ ಮುಖಾಂತರ ರವಾನಿಸಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) ಕರ್ನಾಟಕ ಸರಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸನ್ಮಾನ್ಯ ಕುಲಾಧಿಪತಿಗಳ ಮತ್ತು ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.

**ಪ್ರತಿ ಸಾದರಪೂರ್ವಕವಾಗಿ ಮಾಹಿತಿಗಾಗಿ:**

1. ಮಾನ್ಯ ಎಲ್ಲ ಸಿಂಡಿಕೇಟ ಸಭೆಯ ಸದಸ್ಯರು (ಪಟ್ಟಿಯಂತೆ) (**ಸಿಂಡಿಕೇಟ ಸಭೆಯ ಠರಾವು ಸಂಖ್ಯೆ 57. ದಿನಾಂಕ 20.02.2010ರ** ಪ್ರಕಾರ ವಿದ್ಯಾವಿಷಯಕ್ ಪರಿಷತ್ ಸಭೆಯ ನಡುವಳಿಗಳನ್ನು ಕಳುಹಿಸಿಕೊಡಲಾಗಿದೆ.)
2. ಕುಲಸಚಿವರು (ಮೌಲ್ಯಮಾಪನ), ಕವಿವಿ, ಧಾರವಾಡ.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕವಿವಿ, ಧಾರವಾಡ.
4. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕವಿವಿ, ಧಾರವಾಡ.
5. ಎಲ್ಲ ನಿಖಾಯಗಳ ಡೀನರು, ಕವಿವಿ, ಧಾರವಾಡ.
6. ವಿತ್ತಾಧಿಕಾರಿಗಳು, ಕವಿವಿ, ಧಾರವಾಡ.
7. ಚೇರಮನ್, ಪತ್ರಿಕೋದ್ಯಮ ವಿಭಾಗ, ಕವಿವಿ, ಧಾರವಾಡ.
8. ಸ್ಥಾನಿಕ ಅಭಿಯಂತರರು, ಕವಿವಿ, ಧಾರವಾಡ.
9. ಉಪಕುಲಸಚಿವರು, ಡಿಪಿಎಆರ್, ಪರೀಕ್ಷಾ: ಎಸ್.ಸಿ/ಎಸ್.ಟಿ ಸೆಲ್, ಕವಿವಿ, ಧಾರವಾಡ.
10. ಅಧೀಕ್ಷಕರು, ಯೋಜನಾ ಹಾಗೂ ಅಭಿವೃದ್ಧಿ, ಸಂಯೋಜನೆ, ಪಿಜಿ & ಸರ್ಟಿಫಿಕೇಟ್, ಸಿಂಡಿಕೇಟ ಹಾಗೂ ಶಿಷ್ಯ ವೇತನ ಹಾಗೂ ಪರೀಕ್ಷಾ (ಘಟಿಕೋತ್ಸವ) ಕವಿವಿ, ಧಾರವಾಡ.
11. ಅಧೀಕ್ಷಕರು, ಸಿ.ಡಿ.ಸಿ/ಪರೀಕ್ಷಾ (ಜಿ.ಎ.ಡಿ)/ ಕ.ವಿ.ವಿ, ಧಾರವಾಡ.